**<u>ಸಿವಿಲ್ ನ್ಯಾಯಾಧೀಶರು ಮತ್ತು  ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಫಜಲಪೂರ.</u>**

**<u>ಸಿ.ಸಿ.ನಂ.179/2019</u>**

ಸರಕಾರದ ಪರವಾಗಿಃ  ಅಬಕಾರಿ ನಿರೀಕ್ಷಕರು ಉಪ-ವಿಭಾಗ ಕಲಬುರಗಿ

-:ವಿರುದ್ದ:-

**ಆರೋಪಿ :** ದುಂಡು ತಂದೆ ಸಿದ್ರಾಮಪ್ಪ ಜಮಾದಾರ,
35 ವರ್ಷ, ಉಃ ಖಾಸಗಿ ಕೆಲಸ,
ವಾಸಃ ಲಕ್ಷ್ಮೀಗುಡಿ ಹತ್ತಿರ ಅಫಜಲಪೂರ,
ತಾಃ ಅಫಜಲಪೂರ, ಜಿಃ ಕಲಬುರಗಿ.

**<u>ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ  313 ರ ಪ್ರಕಾರ ಆರೋಪಿತನ ಹೇಳಿಕೆಗಳು</u>**

ಪ್ರಃ1:  ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ 2  ಪ್ರಾಸಾ-01 ಮಹ್ಮದ ಸಲೀಮುದ್ದೀನ ತಂದೆ ಇಪ್ತಿಕರ, ಅಬಕಾರಿ ಮುಖ್ಯ ಪೇದೆ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 02.04.2018 ರಂದು ಬೆಳಿಗ್ಗೆ ತಾನು ಮತ್ತು ಪಂಚರು ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ತಮ್ಮನ್ನು ಕರೆಸಿ ಅಫಜಲಪೂರ ಪಟ್ಟಣದ ಘತ್ತರಗಾ ರಸ್ತೆಯಲ್ಲಿರುವ ದಿಲ್ ಖುಷ ಧಾಭಾದಲ್ಲಿ ಅಕ್ರಮವಾಗಿ ಮದ್ಯ ಸಂಗ್ರಹಣೆ ಮಾಡಿರುತ್ತಾರೆ ಅಂತ ಭಾತ್ಮಿಬಂದ ಮೇರೆಗೆ ಅಲ್ಲಿ ಏನಾದರೂ ಅಕ್ರಮ ಕಂಡುಬಂದಲ್ಲಿ ಪಂಚರಿಗೆ ಪಂಚರಾಗಲು ಹೇಳಿರುತ್ತಾರೆಂದು ಹಾಗೂ ನಂತರ ಬೆಳಿಗ್ಗೆ 8-30 ಗಂಟೆಗೆ ಸರಕಾರಿ ವಾಹನ ಸಂಖ್ಯೆಃ ಕೆಎ-32-ಜಿ-878 ನೇದ್ದರಲ್ಲಿ ಹೊರಟು ಮುಂಜಾನೆ 10-00 ಗಂಟೆಗೆ ದಿಲ್ ಖುಷ ಧಾಭಾಗೆ ತಲುಪಿದ್ದು, ಸಮವಸ್ತ್ರದಲ್ಲಿದ್ದ ತಮ್ಮನ್ನು ನೋಡಿ ಸದರಿ ಆರೋಪಿತನು ಓಡಿ ಹೋದನು. ಎಂದು  ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 3  ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಅಧಿಕಾರಿಗಳು ತಮ್ಮ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶೋದನಾ ಪತ್ರವನ್ನು ಸ್ಥಳದಲ್ಲಿ ತಯಾರಿಸಿ ಅದರ ಮೇಲೆ ಪಂಚರ ಸಹಿ ಪಡೆದು ಶೋದನೆ ಪ್ರಾರಂಭಿಸಿರುತ್ತಾರೆಂದು ಹಾಗೂ ಶೋದನೆ ಮಾಡುವಾಗ ಹೋಟೆಲ ಕೌಂಟರ ಕೆಳಗಡೆ 4 ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡುಬಂದಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 4  ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಅಧಿಕಾರಿಗಳು ಅದನ್ನು ತೆರೆದು ನೋಡಿದಾಗ ಅದರಲ್ಲಿ ನಾಕೌಟ 650 ಎಂ ಎಲ್ ನ 16 ಬಾಟಲಿಗಳು ಮತ್ತು Kingfisher

Strong 650 ML ನ 70 ಬಾಟಲಿಗಳನ್ನು ಒಟ್ಟು 88 ಬಾಟಲಿಗಳನ್ನು ಜಪ್ತಿಪಡಿಸಿಕೊಂಡು ಅವುಗಳಲ್ಲಿ ತಲಾ ಎರಡರಂತೆ 4 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಮುಚ್ಚಳಿಕೆ ಮೇಲೆ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖೆಯ ಮುದ್ರಾ ಸಂಖ್ಯೆ: 415 ನ್ನು ಅರಗಿನಿಂದ ತಯಾರಿಸಿದ ಸೀಲನ್ನು ಹಾಕಿರುತ್ತೇವೆ. ನಂತರ ಗುನ್ನೆ ಸ್ಥಳದ ಚೆಕ್ಕಬಂದಿ ನೋಡಲಾಗಿ ಪೂರ್ವ, ಉತ್ತರ, ದಕ್ಷಿಣಕ್ಕೆ ಖಾಲಿ ಜಾಗ ಮತ್ತು ಪಶ್ಚಿಮಕ್ಕೆ ಘತ್ತರಗಕ್ಕೆ ಹೋಗುವ ರಸ್ತೆ ಇರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 5 ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಪಂಚನಾಮೆಯನ್ನು ಬೆಳಿಗ್ಗೆ 10-15 ರಿಂದ 11-15 ರವರೆಗೆ ಬರೆದಿರುತ್ತಾರೆಂದು ನಂತರ ಮುಂದಿನ ಕ್ರಮಕ್ಕಾಗಿ ಠಾಣೆಗೆ ಮರಳಿ, ದಿನಾಂಕಃ 05.09.2018 ರಂದು ರಾಸಾಯನಿಕ ಪರೀಕ್ಷಾ ಕೇಂದ್ರ ಬೆಂಗಳೂರಿಗೆ ಮುದ್ದೆಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ತಾನು ತೆಗೆದುಕೊಂಡು ಹೋಗಿ, ದಿನಾಂಕಃ 05-10-2018 ರಂದು ರಾಸಾಯನಿಕ ವರದಿ ಮತ್ತು ಮುದ್ದೆಮಾಲುಗಳನ್ನು ಮರಳಿ ಕಚೇರಿಗೆ ತಂದು ಹಾಜರುಪಡಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 6 ಪ್ರಾಸಾ-02 ನಿಬಣ್ಣ ತಂದೆ ಸಿದ್ದಪ್ಪ ನಿವೃತ್ತ ಅಬಕಾರಿ ಉಪ ಅಧೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 02.04.2018 ರಂದು ಬೆಳಿಗ್ಗೆ 08-00 ಗಂಟೆಗೆ ತಾನು ಕಚೇರಿ ಕರ್ತವ್ಯದಲ್ಲಿದ್ದಾಗ ಖಚಿತ ಭಾತ್ಮಿ ಬಂದಿರುತ್ತದೆ. ಸದರಿ ಭಾತ್ಮಿ ಏನೆಂದರೆ ಅಫಜಲಪೂರದಿಂದ ಘತ್ತರಗಾಕ್ಕೆ ಹೋಗುವ ರಸ್ತೆಯ ಮಾರ್ಗದ ದಿಲ್ ಖುಷ ಧಾಬಾದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬುದಾಗಿರುತ್ತದೆ. ನಂತರ ಇಬ್ಬರು ವ್ಯಕ್ತಿಗಳನ್ನು ಕರೆಯಿಸಿ ಅವರಿಗೆ ಭಾತ್ಮಿ ಬಗ್ಗೆ ತಿಳಿಸಿ ಪಂಚರಾಗಲು ಕೋರಿದ್ದು ಸದರಿಯವರು ಒಪ್ಪಿಕೊಂಡಿದರಿಂದ ತಾನು, ಪಂಚರು ಮತ್ತು ಸಿಬ್ಬಂದಿ ಕೂಡಿಕೊಂಡು ತಮ್ಮ ಇಲಾಖಾ ಜೀಪಿನಲ್ಲಿ ಭಾತ್ಮಿಬಂದ ಸ್ಥಳಕ್ಕೆ ಹೋಗಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 7 ಪ್ರಾಸಾ-02 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಸದರಿ ಆರೋಪಿತನು ತಮಗೆ ನೋಡಿ ಓಡಿಹೋಗಿರುತ್ತಾನೆಂದು ಹಾಗೂ ಧಾಬಾದಲ್ಲಿ ಪರಿಶೀಲನೆ ಮಾಡುತ್ತಿರುವಾಗ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 650 ML ನ 72 Kingfisher ಬಿಯರ ಬಾಟಲಿ ಮತ್ತು 650 ML ನ 16 ನಾಕೌಟ ಬಿಯರ ಬಾಟಲಿ ದೋರೆತಿದ್ದು, ಅವುಗಳನ್ನು ಜಪ್ತಿಪಡಿಸಿಕೊಂಡು ಸದರಿಯವುಗಳಿಂದ ಪ್ರತ್ಯೇಕವಾಗಿ 2 ರಂತೆ ಒಟ್ಟು 4 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ಅಂತ ತೆಗೆದುಕೊಂಡು, ಸದರಿಯವುಗಳಿಗೆ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಸೀಲು ಮಾಡಿ ಪಂಚರ ಸಮಕ್ಷಮ ಸ್ಥಳದಲ್ಲಿ ಪಂಚನಾಮೆ ಮಾಡಿ, ಅಬಕಾರಿ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 8 ಪ್ರಾಸಾ-05 ವಿಠಲರಾವ ತಂದೆ ಮಹಾದೇವ ಅಬಕಾರಿ ನಿರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 26.12.2018 ರಂದು ಈ ಪ್ರಕರಣದ ಕಡತವನ್ನು ಚಾಸಾ-1 ರವರಿಂದ ಪಡೆದುಕೊಂಡು ಅದೇ ದಿನ ಧಾಬಾದ ಮಾಲೀಕತ್ವ ಕುರಿತು ಪುರಸಭೆ ಅಫಜಲಪೂರ ರವರಿಗೆ ಪತ್ರ ಬರೆದಿದ್ದು, ದಿನಾಂಕಃ30.01.2019 ರಂದು ಮುಖ್ಯಾಧಿಕಾರಿಗಳಿಂದ ಮಾಲೀಕತ್ವ ಕುರಿತು ವರದಿ ಸ್ವೀಕರಿಸಿದ್ದು, ನಂತರ ಎಲ್ಲಾ ದಾಖಲಾತಿಗಳನ್ನು ಪರಿಶೀಲನೆ ಮಾಡಿ, ದಿನಾಂಕಃ 23.07.2019 ರಂದು ಆರೋಪಿತನ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ-9 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-10 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ

(ಆರೋಪಿತನ ಹೇಳಿಕೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿನಾಂಕಃ 06.03.2026

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.